**OS 23/2018**
**PW1**

ದಿನಾಂಕ:03.02.2026ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜೆ ಪಿ ವಕೀಲರಿಂದಃ

ನನಗೆ ಕನ್ನಡ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಇಂಗ್ಲೀಷ್ ಭಾಷೆಯಲ್ಲಿದ್ದು ಓದಿ ತಿಳಿದುಕೊಂಡಿಲ್ಲ. ನನ್ನ ಪ್ರಮಾಣ ಪತ್ರವನ್ನು ನನ್ನ 4 ಜನ ಅಣ್ಣ ತಮ್ಮಂದಿರ ಪರವಾಗಿ ಹಾಕಿದ್ದೇನೆ. ಆ ರೀತಿ ಅವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಕೊಟ್ಟಿದ್ದಾರೆ. ಅಧಿಕಾರ ಕೊಟ್ಟಿರುವುದಕ್ಕೆ ನ್ಯಾಯಾಲಯಕ್ಕೆ ದಾಖಲು ಹಾಜರುಪಡಿಸಿದ್ದೀರ ಎಂದರೇ ಹೌದು. ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ಮೂಲ ದಾವೆ ಸಂಖ್ಯೆ 54/2017 ರಂತೆ ದಾವೆ ದಾಖಲೆ ಮಾಡಿದೆ ಎಂದರೇ ಹೌದು. ಆ ದಾವೆಯು ಸಹ ನಾವೇ ವಾದಿಯರು ಹಾಗೂ ಈ ದಾವೆಯ ಪ್ರತಿವಾದಿಯವರು ಆ ದಾವೆಯಲ್ಲಿ ಪ್ರತಿವಾದಿಯರು. ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

2. ಅಗ್ರಹಾರ ಒರೆಗೆನಹಳ್ಳಿ ಹೊಟ್ಟೆ ಬೋರೆಗೌಡ ನನ್ನ ತಾತ. ಹೊಟ್ಟೆ ಬೋರೆಗೌಡ ರವರಿಗೆ ಬೋರೆಗೌಡ, ಚನ್ನೇಗೌಡ ಮತ್ತು ಕರೀಗೌಡ ಎಂಬ 3 ಜನ ಮಕ್ಕಳು ಎಂದರೆ ಹೌದು. ಬೋರೇಗೌಡ ನನ್ನ ತಂದೆ ಎಂದರೇ ಹೌದು. ಹೊಟ್ಟೆ ಬೋರೆಗೌಡ ರವರ ಮಗ ಚನ್ನೇಗೌಡರವರಿಗೆ ಚನ್ನೇಗೌಡ ಎಂಬ ಒಬ್ಬನೇ ಮಗ ಎಂದರೇ ಹೌದು. ಹೊಟ್ಟೆ ಬೋರೆಗೌಡ ರ 3 ನೇ ಮಗ ಕರೀಗೌಡರ ಹೆಂಡತಿ ಹೆಸರು ಚನ್ನಮ್ಮ ಎಂದರೇ ಹೌದು. ಕರೀಗೌಡ ಮತ್ತು ಚನ್ನಮ್ಮನವರಿಗೆ ಮಕ್ಕಳಿಲ್ಲ ಎಂದರೇ ಹೌದು. ಕರೀಗೌಡ ಮತ್ತು ಚನ್ನಮ್ಮನವರಿಗೆ ಮಕ್ಕಳು ಸಂತಾನ ಇಲ್ಲದ ಕಾರಣ ನಾಗೇಶ್ ಎಂಬುವವರನ್ನು ಸಾಕಿಕೊಂಡಿದ್ದಾರೆ ಎಂದರೆ ಇಲ್ಲ. 20 ವರ್ಷ ಆದ ನಂತರ ಕರೆದುಕೊಂಡು ಬಂದು ಮದುವೆ ಮಾಡಿಸಿದ್ದಾರೆ.

3. ಅಂಕುಶನಹಳ್ಳಿ ಗ್ರಾಮದ, ವಿರೂಪಾಕ್ಷಿಪುರ ಹೋಬಳಿ, ಸರ್ವೆ ನಂ 77/1 ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ರವರಿಗೆ 30 ಗುಂಟೆ ಇದೆ ಎಂದರೇ ಇಲ್ಲ. ಜಮೀನನ್ನು ನಾವು ಮಾಡುತ್ತಿದ್ದೇವೆ. ಚನ್ನೇಗೌಡ ಬಿನ್ ಚನ್ನೇಗೌಡ ಎಂದರೇ ಹೊಟ್ಟೆ ಬೋರೇಗೌಡರ 2ನೇ ಮಗ ಎಂದರೇ ಹೌದು. ಅದೇ ಸರ್ವೆ ನಂ 1.20 ಎಕರೆ ಹೊಟ್ಟೆ ಬೋರೇಗೌಡರ ಹೆಸರಿನಲ್ಲಿ ಇದೆ ಎಂದರೇ ಹೌದು. ಆ ಪಹಣಿ ಪತ್ರಿಕೆಯಲ್ಲಿ ಹೊಟ್ಟೆ ಬೋರೇಗೌಡರ ಹೆಸರಿನಲ್ಲಿ 1.20 ಎಕರೆ ಚನ್ನೇಗೌಡರ ಹೆಸರಿನಲ್ಲಿ 30 ಗುಂಟೆ ಇದೆ ಎಂಬುದನ್ನು ಒಪ್ಪಿ ಕೊಳ್ಳುತ್ತೇನೆ. ಸಾಕ್ಷಿ ಸರ್ವೆ ನಂ 77/1 ರ ಪಹಣಿ ಪತ್ರಿಕೆಯನ್ನು ನೋಡಿ ಒಪ್ಪಿಕೊಂಡ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ಅಗ್ರಹಾರ ಒರೆಗೆನಹಳ್ಳಿ ಗ್ರಾಮದ ಸರ್ವೆ ನಂ 91/4 ರಲ್ಲಿ 16 ಗುಂಟೆ ಚನ್ನೇಗೌಡ ಹೆಸರಿನಲ್ಲಿದೆ ಇದೆ ಎಂದರೆ ಗೊತ್ತಿಲ್ಲ. ಅದೇ ಗ್ರಾಮದ 93/4 ರಲ್ಲಿ 1.5 ಎಕರೆ ಗುಂಟೆ ಪೈಕಿ 36 ಗುಂಟೆ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿದೆ ಇದೆ ಎಂದರೆ ಒಟ್ಟು ಕುಟುಂಬದ ಆಸ್ತಿ.

4. ಅದೇ ಗ್ರಾಮದ ಸರ್ವೆ ನಂ 126/6 ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿ 12 ಗುಂಟೆ ಇದೆ ಎಂದರೆ ಒಟ್ಟು ಕುಟುಂಬದ ಆಸ್ತಿ. ಅದೇ ಗ್ರಾಮದ ಸರ್ವೆ ನಂ 118/9 ರಲ್ಲಿ 14 ಗುಂಟೆ ಪೈಕಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರನಲ್ಲಿ 7 ಗುಂಟೆ ನಾಗೇಶ್ ಬಿನ್ ಕರೀಗೌಡ 7 ಗುಂಟೆ ಇದೆ ಎಂದರೆ ಸುಳ್ಳು ಅದು ಒಟ್ಟು ಕುಟುಂಬದ ಆಸ್ತಿ. ಅದೇ ಗ್ರಾಮದ ಸರ್ವೆ ನಂ 138/4 ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿ 16 ಗುಂಟೆ ಇದೆ ಎಂದರೆ ಸುಳ್ಳು. ಅದೇ ಗ್ರಾಮದ ಸರ್ವೆ ನಂ 138/2ಬಿ ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿ 13 ಗುಂಟೆ ಇದೆ ಎಂದರೆ ಒಟ್ಟು ಕುಟುಂಬದ ಆಸ್ತಿ.

5. ಅದೇ ಗ್ರಾಮದ ಸರ್ವೆ ನಂ 143/2 ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿ 9 ಗುಂಟೆ ಮತ್ತು ನಾಗೇಶ್ ಬಿನ್ ಲೇಟ್ ಕರೀಗೌಡ ಹೆಸರಿನಲ್ಲಿ 7 ಗುಂಟೆ ಇದೆ ಎಂದರೆ ಒಟ್ಟು ಕುಟುಂಬದ ಆಸ್ತಿ. ಅದೇ ಗ್ರಾಮದ ಸರ್ವೆ ನಂ 143/4ಎ ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿ 7 ½ ಗುಂಟೆ ನಾಗೇಶ್ ಬಿನ್ ಲೇಟ್ ಕರೀಗೌಡ ಹೆಸರಿನಲ್ಲಿ 7 ½ ಗುಂಟೆ ಇದೆ ಎಂದರೆ ಒಟ್ಟು

ಕುಟುಂಬದ ಆಸ್ತಿ. ಅದೇ ಗ್ರಾಮದ ಸರ್ವೆ ನಂ 143/4ಬಿ ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ಹೆಸರಿನಲ್ಲಿ 5 ಗುಂಟೆ ನಾಗೇಶ್ ಬಿನ್ ಲೇಟ್ ಕರೀಗೌಡ ಹೆಸರಿನಲ್ಲಿ 5 ಗುಂಟೆ ಇದೆ ಎಂದರೆ ಒಟ್ಟು ಕುಟುಂಬದ ಆಸ್ತಿ.

6. ಈ ಮೇಲೆ ಹೇಳಿದ ಆಸ್ತಿ ನನ್ನ ತಾತ ಹೊಟ್ಟೆಬೋರೆಗೌಡರವರು ಖರೀದಿಗೆ ಮಾಡಿದ ಆಸ್ತಿ ಎಂದರೇ ಇರಬಹುದು. ಹೊಟ್ಟೆ ಬೋರೆ ಗೌಡ ಬದುಕಿದಾಗಲೆ ಅವರ ಮಕ್ಕಳಾದ ಬೋರೆಗೌಡ, ಚನ್ನೇಗೌಡ ಮತ್ತು ಕರೀಗೌಡ ಹಾಗೂ ಹೊಟ್ಟೆಬೋರೆಗೌಡರವರು ದಾವಾ ಸ್ವತ್ತುಗಳು ಹಾಗೂ ಇತರೆ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ಬೋರೆಗೌಡ, ಚನ್ನೇಗೌಡ ಮತ್ತು ಕರೀಗೌಡ ಬಾಯಿ ಮಾತಿನಂತೆ ವಿಭಾಗ ಮಾಡಿಕೊಂಡ ಸ್ವತ್ತುಗಳು ಅವರ ಹೆಸರಿಗೆ ದಾಖಲೆಗಳು ಆಗಿದೆ ಎಂದರೆ ಸುಳ್ಳು. ಚನ್ನೇಗೌಡರ ಭಾಗಕ್ಕೆ ಬಂದ ಆಸ್ತಿ ಅವರ ಒಬ್ಬನೆ ಮಗ ಚನ್ನೇಗೌಡರಿಗೆ ಬಂದಿದೆ ಎಂದರೆ ಸುಳ್ಳು. ಕರೀಗೌಡರ ಭಾಗಕ್ಕೆ ಬಂದ ಆಸ್ತಿ ಅವರ ಹೆಂಡತಿ ಚನ್ನಮ್ಮ ರವರ ಹೆಸರಿಗೆ ಬಂದಿದೆ ಎಂದರೇ ಸುಳ್ಳು. ಚನ್ನಮ್ಮ ರವರ ತಮ್ಮ ಜೀವಿತಾ ಕಾಲದಲ್ಲಿ ಅವರಿಗೆ ಮಕ್ಕಳು ಇಲ್ಲದ ಕಾರಣ ಅವರಿಗೆ ಬಂದ ಸ್ವತ್ತುಗಳನ್ನು ನಾಗೇಶ್ ಮತ್ತು ಸುರೇಶ್ ರವರಿಗೆ ದಾನ ಹಾಗೂ ವಿಲ್ ಮೂಲಕ ನೀಡಿದ್ದಾರೆಂದರೆ ಸುಳ್ಳು. ಅದರಂತೆ ದಾವಾ ಸ್ವತ್ತುಗಳು ನಾಗೇ್ ಮತ್ತು ಸುರೇಶ್ ಹೆಸರಿನಲ್ಲಿದೆ ಎಂದರೇ ಸುಳ್ಳು ದಾಖಲೆ ಮಾಡಿಕೊಂಡಿದ್ದಾರೆ.

7. ಚನ್ನೇಗೌಡ ಮತ್ತು ಕರೀಗೌಡ ರವರಿಗೆ ಬಂದ ಆಸ್ತಿಯಂತೆ ನನ್ನ ತಂದೆ ಬೋರೇಗೌಡ ರವರ ಹೆಸರಿಗೆ ಬಂದಿದೆ ಎಂದರೆ ಸುಳ್ಳು. ನನ್ನ ತಂದೆ ಬೋರೇಗೌಡರವರಿಗೆ ಬಂದ ಆಸ್ತಿಯನ್ನು 1ನೇ ಪ್ರತಿವಾದಿ ಮತ್ತು ಅವರ ತಂದೆಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆಂದರೆ ಸುಳ್ಳು. ನನ್ನ ತಂದೆಯವರು ಬರೆದು ಕೊಟ್ಟು ಕ್ರಯ ಪತ್ರದಂತೆ ಅದರ ದಾಖಲೆಗಳು 1ನೇ ಪ್ರತಿವಾದಿ ಮತ್ತು ಅವರ ತಂದೆ ಹೆಸರಿನಲ್ಲಿ ಇದೆ ಎಂದರೆ ಸುಳ್ಳು. ಹೊಟ್ಟೆಬೋರೆಗೌಡರವರು ಬದುಕಿದ್ದಾಗಲೇ ನನ್ನ ತಂದೆ, ಚನ್ನೇಗೌಡ ಮತ್ತು ಕರೀಗೌಡ ಬೇರೆ ಬೇರೆ ವಾಸ ಇದ್ದರು ಎಂದರೇ ಇಲ್ಲ. ಒಟ್ಟು ಕುಟುಂಬದಲ್ಲಿ ಇದ್ದರು. ಈಗ ನಿಮ್ಮ ಕುಟುಂಬ 1 ಮತ್ತು 2ನೇ ಪ್ರತಿವಾದಿ ಕುಟುಂಬದ

ಬೇರೆ ಬೇರೆ ಇದೆ ಎಂದರೆ ಆಸ್ತಿ ಒಟ್ಟಿಗೆ ಇದೆ. ಆಸ್ತಿ ಒಟ್ಟಿಗೆ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರ ಎಂದರೇ ಹೌದು. ಆಸ್ತಿಗಳು 1 ಮತ್ತು 2ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ವಿಚಾರ ನನಗೆ 2017 ಗೊತ್ತಾಗಿರುತ್ತದೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. **)**